<u>ಈ ಲೇಖನದ ವಿಷಯಾನುಕ್ರಮಣಿಕೆ</u>


| | |
|---|---|
| **ನಿರ್ಮಾಲ್ಯತೀರ್ಥ ಮತ್ತು ಊರ್ಧ್ವಪುಂಡ್ರಧಾರಣೆ** | **2** |
| ವಿಸರ್ಜನೆ ಅಭಿಷೇಕ ಒಟ್ಟಿಗೇ ಎಂಬ ವಾದ | 3 |
| ಗೋಪಿಯನ್ನು ಯಾವಾಗಲೂ ನಿರ್ಮಾಲ್ಯದಿಂದಲೇ ಹಚ್ಚಿಕೊಳ್ಳಬೇಕು ಎಂಬ ವಾದ | 4 |
| **ಶ್ರೀಮದಾಚಾರ್ಯರು ಅನುಸರಿಸುತ್ತಿದ್ದ ಕ್ರಮ** | **10** |
| ಸೂರ್ಯೋದಯಕ್ಕಿಂತ ಮುಂಚೆ ನಿರ್ಮಾಲ್ಯವಿಸರ್ಜನೆ | 10 |
| ಮಧ್ಯಾಹ್ನ ಪೂಜೆಗಿಂತ ಮುಂಚೆ ನಿರ್ಮಾಲ್ಯ ಅಭಿಷೇಕ | 12 |
| ಬೆಳಗಿನ ಊರ್ಧ್ವಪುಂಡ್ರ ಕೇವಲ ನೀರಿನಿಂದಲೇ | 13 |
| ಸಂನ್ಯಾಸಪದ್ಧತಿಯ ಪ್ರಮಾಣ | 13 |
| ಯೋಗದೀಪಿಕಾ ವಚನ | 17 |
| ಶ್ರೀ ಕೃಷ್ಣಾಚಾರ್ಯರ ವಚನ | 18 |
| ಶ್ರೀ ಶ್ರೀನಿವಾಸಾಚಾರ್ಯರು ಮುಂತಾದವರ ವಚನ | 19 |

## ನಿರ್ಮಾಲ್ಯತೀರ್ಥ ಮತ್ತು ಊರ್ಧ್ವಪುಂಡ್ರಧಾರಣೆ

ನಿರ್ಮಾಲ್ಯವಿಸರ್ಜನೆಯ ಮತ್ತು ನಿರ್ಮಾಲ್ಯ ಅಭಿಷೇಕದ ಕಾಲದ ಕುರಿತು, ಹಾಗೂ ಗೋಪೀಚಂದನ ಧಾರಣೆಯ ಕುರಿತು ಇಂದಿನ ಮಾಧ್ವರಲ್ಲಿ ತುಂಬ ಜನ ಗೊಂದಲ ಮಾಡಿಕೊಂಡಿದ್ದಾರೆ. ಆದರೆ ನಮ್ಮದು ಮಧ್ವಶಾಸ್ತ್ರ. ಗೊಂದಲಕ್ಕೆ ಅವಕಾಶವೇ ಇಲ್ಲ.

ನಮ್ಮ ಪ್ರಾಚೀನ ಆಚಾರ್ಯರ ಗ್ರಂಥಗಳು ಸುಸ್ಪಷ್ಟವಾಗಿ ತತ್ವವನ್ನು ತಿಳಿಸಿವೆ.

ಪ್ರಮಾಣವಿಲ್ಲದೇ ಮಾತನಾಡುವ, ನಮ್ಮ ಗುರುಗಳು ತಪ್ಪು ಮಾಡಿದರೂ ಅದೇ ಸರಿ ಎಂದು ವಾದಿಸುವ ಪಾಖಂಡಿ ಜನರಿಂದ ದೂರವಾಗಿ ನಮ್ಮ ಪ್ರಾಚೀನ ಆಚಾರ್ಯರು ತಿಳಿಸಿರುವ ಪ್ರಮಾಣಗಳನ್ನು ನಾವು ಸುಸ್ಪಷ್ಟವಾಗಿ

ಅರ್ಥಮಾಡಿಕೊಂಡು ಆಚರಿಸಿದಾಗ ಯಾವ ಗೊಂದಲವೂ ಇರುವದಿಲ್ಲ.

## ವಿಸರ್ಜನೆ ಅಭಿಷೇಕ ಒಟ್ಟಿಗೇ ಎಂಬ ವಾದ

**ಮೊದಲನೆಯ ವಾದ— ನಿರ್ಮಾಲ್ಯ ವಿಸರ್ಜನೆ ಮತ್ತು ಅಭಿಷೇಕಗಳನ್ನು ಒಟ್ಟಿಗೇ ಮಾಡಬೇಕು. ಬೇರೆಬೇರೆ ಮಾಡಬಾರದು.**

ಆದರೆ ಸೂರ್ಯೋದಯಕ್ಕಿಂತ ಮುಂಚೆ ನಿರ್ಮಾಲ್ಯವಿಸರ್ಜನೆಯನ್ನೂ, ಆ ನಂತರ ದೇವಪೂಜೆಯ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ಶಾಸ್ತ್ರಾಧ್ಯಯನವನ್ನೂ ಮಾಡಿ ನಂತರ ಸ್ನಾನ ಮಾಡಿ ಪೂಜೆಯನ್ನು ಮಾಡಬೇಕು ಎಂದು ಸ್ವಯಂ ಶ್ರೀಮದಾಚಾರ್ಯರೇ ಆಚರಿಸಿ ತೋರಿಸಿದ್ದಾರೆ ಮತ್ತು ಸದಾಚಾರಸ್ಮೃತಿಯಲ್ಲಿ ತಿಳಿಸಿದ್ದಾರೆ. ಇಲ್ಲಿ ಟೀಕಾಕೃತ್ಪಾದರ ಪದ್ಯಮಾಲಾ ಗ್ರಂಥಕ್ಕೂ, ಮಧ್ವವಿಜಯಾದಿಗಳಿಗೂ ವಿರೋಧವಿದ್ದಂತೆ ತೋರುತ್ತದೆ. ವಸ್ತುಸ್ಥಿತಿಯಲ್ಲಿ ವಿರೋಧವಿಲ್ಲ. ಇದನ್ನು ಮುಂದಿನ ಲೇಖನದಲ್ಲಿ ಕೈಗೆತ್ತಿಕೊಂಡು ಚರ್ಚಿಸುತ್ತೇನೆ.

# ಗೋಪಿಯನ್ನು ಯಾವಾಗಲೂ ನಿರ್ಮಾಲ್ಯದಿಂದಲೇ ಹಚ್ಚಿಕೊಳ್ಳಬೇಕು ಎಂಬ ವಾದ

## ಎರಡನೆಯ ವಾದ —

**ಗೋಪೀಚಂದನವನ್ನು ಯಾವಾಗ ಹಚ್ಚಿಕೊಂಡರು ನಿರ್ಮಾಲ್ಯತೀರ್ಥದಿಂದಲೇ ಹಚ್ಚಿಕೊಳ್ಳಬೇಕು. ಬರಿಯ ನೀರಿನಲ್ಲಿ ಕಲಿ ಇರುತ್ತಾನೆ, ಹೀಗಾಗಿ ದೇವರಿಗೆ ಅಭಿಷೇಕ ಮಾಡಿದ ನೀರಿನಲ್ಲಿಯೇ ಗೋಪಿ ಹಚ್ಚಿಕೊಳ್ಳಬೇಕು.**

ತುಂಬ ವಿಚಿತ್ರ  ಪರಿಕಲ್ಪನೆ ಇದು. ಬರಿಯ ನೀರಿನಲ್ಲಿ ಕಲಿ ಇರುವದಾದರೆ ಆ ನೀರಿನಲ್ಲಿ ಸ್ನಾನ ಮಾಡುವದು ಹೇಗೆ. ನಾವು ಸ್ನಾನ ಮಾಡುವ ನೀರನ್ನೇನು ದೇವರಿಗೆ ಅಭಿಷೇಕ ಮಾಡಿರುವದಿಲ್ಲವಲ್ಲ. ಅಡಿಗೆ ಮಾಡುವ ನೀರನ್ನು ಅಭಿಷೇಕ ಮಾಡಿರುವದಿಲ್ಲವಲ್ಲ.

ಇವೆಲ್ಲ ಬರಿಯ ಕಲ್ಪನೆಗಳಷ್ಟೆ. ಕಲಿಯುಗದ ಈ ಘೋರ ದಿನಗಳಲ್ಲಿ ಕಲಿ ಎಲ್ಲ ಪದಾರ್ಥಗಳನ್ನೂ ಆಕ್ರಮಿಸಿ ನಿಂತಿದ್ದಾನೆ, ಸಂಶಯವಿಲ್ಲ. ನೀರಿನಲ್ಲಿಯೂ ಕಲಿ ಇದ್ದಾನೆ, ದೇವರ

ಸ್ಮರಣೆಯನ್ನು ಮತ್ತು ವಾಯುದೇವರ ಸ್ಮರಣೆಯನ್ನು ಮಾಡಿ ಅದನ್ನು ಪರಿಹರಿಸಿಕೊಳ್ಳಬೇಕು. ಆದರೆ ಧಾರಣೆ ಮಾಡಬೇಕಾದರೆ ವಿಷ್ಣುಪಾದೋದಕದಿಂದಲೇ ಧಾರಣೆ ಮಾಡಬೇಕು ಎನ್ನುವದು ತಪ್ಪು.

ಗೋಪಿಯನ್ನು ತೇಯುವ ನೀರನ್ನು ಗಾಯತ್ರಿಯಿಂದ ಅಭಿಮಂತ್ರಿಸಬೇಕು ಎಂದು ಶಾಸ್ತ್ರ ವಿಧಿಸುತ್ತದೆ. ಹೀಗಾಗಿ ಅದರಿಂದಲೇ ಕಲಿವಿನಾಶವಾಗುತ್ತದೆ. ಸ್ತ್ರೀಯರು ನಾರಾಯಣ ಸ್ಮರಣೆ ಮಾಡುತ್ತ ತೇಯಬೇಕು.

ವಿಷ್ಣುಪಾದೋದಕದಿಂದ ಗೋಪೀಧಾರಣೆ ಸರ್ವಶ್ರೇಷ್ಠವಾದದ್ದು. ಸಂಶಯವೇ ಇಲ್ಲ. ಒಂದು ಬಾರಿ ಪ್ರಾಶನ ಮಾಡಿದಾಗ 12 ವರ್ಷಗಳ ಉಪವಾಸದ ಮಹಾಫಲವನ್ನು ನೀಡುವ ಆ ವಿಷ್ಣುಪಾದೋದಕದಿಂದ ಗೋಪಿಯನ್ನು ಧಾರಣೆ ಮಾಡಿದಾಗ ಮೈ ಪರಮಪವಿತ್ರವಾಗುತ್ತದೆ. ಹಚ್ಚಿಕೊಳ್ಳಲೇಬೇಕು. ಯಾವಾಗ, ನಿರ್ಮಾಲ್ಯ ಅಭಿಷೇಕದ ನಂತರ.

ಇದು ದಿವಸದಲ್ಲಿ ಎರಡು ಸ್ನಾನ ಮಾಡಿದಾಗ ಮಾತ್ರ ಮಾಡಲು ಸಾಧ್ಯ. ಸಂಧ್ಯಾವಂದನೆ, ನಿರ್ಮಾಲ್ಯ ವಿಸರ್ಜನೆ, ತುಳಸೀ-ಪುಷ್ಪಸಂಗ್ರಹ, ಶಾಸ್ತ್ರಾಧ್ಯಯನಕ್ಕಾಗಿ ಒಂದು ಸ್ನಾನ. ಆ ಸ್ನಾನದಲ್ಲಿ ಕೇವಲ ನೀರಿನಿಂದ ಗೋಪೀಧಾರಣೆ[1].

ಆ ನಂತರ ಪೂಜೆಗಾಗಿ ಸ್ನಾನ. ಮೊದಲಿಗೆ ನೀರಿನಲ್ಲಿಯೇ ಊರ್ಧ್ವಪುಂಡ್ರ ಧಾರಣೆ ಮಾಡಿ, ದೇವರ ಮನೆಯನ್ನು ವಿಧ್ಯುಕ್ತವಾಗಿ ಪ್ರವೇಶ ಮಾಡಿ, ಬ್ರಹ್ಮಪಾರಸ್ತವ, ಘಂಟಾನಾದವನ್ನು ಮಾಡಿ ನಿರ್ಮಾಲ್ಯ ಅಭಿಷೇಕ ಮಾಡಿ ಆ ನಿರ್ಮಾಲ್ಯತೀರ್ಥವನ್ನು ಭಕ್ತಿಯಿಂದ ಸ್ವೀಕಾರ ಮಾಡಿ, ಆ ತೀರ್ಥದಿಂದಲೇ ಗೋಪೀಚಂದನವನ್ನು ಹಚ್ಚಿಕೊಳ್ಳಬೇಕು.

ಇಷ್ಟು ತತ್ವವನ್ನು ಶ್ರೀ ಮಧ್ವವಿಜಯ, ಶ್ರೀ ಮಧ್ವಾನುಜಾಚಾರ್ಯರ ಸಂನ್ಯಾಸಪದ್ಧತಿಗಳು ತಿಳಿಸಿವೆ.

---

[1] ಶ್ರೀ ಮಧ್ವಾನುಜಾಚಾರ್ಯರ ಸಂನ್ಯಾಸಪದ್ಧತಿಯ ವಚನವನ್ನು ಪ್ರಮಾಣವನ್ನಾಗಿ ನೀಡಿದ್ದೇನೆ.

ಸಾವಧಾನವಾಗಿ ಓದುತ್ತ ಹೋಗಿ, ಉಪನ್ಯಾಸವನ್ನು ಕೇಳಿ. ಇನ್ನೂ ಸ್ಪಷ್ಟವಾಗುತ್ತದೆ.

ಮತ್ತೂ ಸಂಶಯವಿದ್ದಲ್ಲಿ ಪ್ರಶ್ನೆಗಳನ್ನು ಕೇಳಿ.

ಯಾವುದೇ ಕರ್ಮದ ಆಚರಣೆ ಮಾಡಬೇಕಾದರೂ ಪ್ರಮಾಣಗಳ ಆಧಾರವನ್ನಿಟ್ಟುಕೊಂಡು, ಯುಕ್ತಿಯಿಂದ ನಿರ್ಣಯಿಸಿಕೊಂಡು ಭಕ್ತಿಯಿಂದ ಆಚರಣೆ ಮಾಡಿ. ಫಲ ದೊರೆಯುತ್ತದೆ. ಸ್ವಾಮಿ ಪ್ರೀತನಾಗುತ್ತಾನೆ.

ಶಾಸ್ತ್ರದ ಪ್ರಮಾಣಗಳಿದ್ದಾಗಲೂ ಅವನ್ನು ಬಿಟ್ಟು ಶಾಸ್ತ್ರವಿರುದ್ಧವಾದ ಆಚರಣೆ ಮಾಡಬಾರದು. ಮತ್ತು ದೇವರ ಪೂಜೆಯ ವಿಷಯದಲ್ಲಿ “ಕಾಮಾನುಸಾರಿತಾ” ಅಂದರೆ ಮನಸ್ಸಿಗೆ ತೋಚಿದಂತೆ ಆಚರಿಸುವದು ಅಪರಾಧ ಎಂದು ಶ್ರೀವರಾಹದೇವರು ದ್ವಾತ್ರಿಂಶದಪರಾಧ-ಸ್ತೋತ್ರದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ನಿರ್ಮಾಲ್ಯತೀರ್ಥದಿಂದ ಗೋಪೀಚಂದನ ಹಚ್ಚಿಕೊಳ್ಳಬೇಕಾದರೆ ಎರಡು ಸ್ನಾನವಾಗಲೇ ಬೇಕು. ಮೊದಲನೇ ಸ್ನಾನ ಮಾಡಿ ಗೋಪಿ

ಹಚ್ಚಿಕೊಂಡು ಸಂಧ್ಯಾ-ನಿರ್ಮಾಲ್ಯವಿಸರ್ಜನೆ-ತುಳಸೀ ಚಯನವನ್ನು ಮಾಡಿ ಎರಡನೇ ಸ್ನಾನ ಮಾಡಿ ನೀರಿನಿಂದ ಊರ್ಧ್ವಪುಂಡ್ರ ಧಾರಣೆ ಮಾಡಿ ನಿರ್ಮಾಲ್ಯಾಭಿಷೇಕವನ್ನು ಮಾಡಿ ಗೋಪೀಚಂದನವನ್ನು ಹಚ್ಚಿಕೊಳ್ಳಬೇಕು. ಶಾಸ್ತ್ರ ತಿಳಿಸುವ ಪ್ರಕಾರ ಪೂಜೆಯಾಗಬೇಕಾದರೆ ಎರಡು ಸ್ನಾನವಾಗಲೇ ಬೇಕು. ಒಂದೇ ಸ್ನಾನದ ಪಕ್ಷದಲ್ಲಿ ನಿರ್ಮಾಲ್ಯತೀರ್ಥದಿಂದ ಗೋಪೀಚಂದನ ಹಚ್ಚಿಕೊಳ್ಳಲು ಸಾಧ್ಯವಿಲ್ಲ.

ಅಥವಾ ಮಗ ಅಥವಾ ಶಿಷ್ಯನಿಂದ ನಿರ್ಮಾಲ್ಯ ವಿಸರ್ಜನೆಯನ್ನು ಮಾಡಿಸಿ ತಾನು ಸ್ನಾನ ಮಾಡಿ ಬಂದು ನಿರ್ಮಾಲ್ಯ ಅಭಿಷೇಕ ಮಾಡಿ ಗೋಪೀಚಂದನ ಹಚ್ಚಿಕೊಳ್ಳಬಹುದು, ಆಗ ಒಂದೇ ಸ್ನಾನವಲ್ಲ ಎಂದು ನೀವು ಕೇಳಬಹುದು. ನಿಜ ಅವಶ್ಯವಾಗಿ ಮಾಡಬಹುದು. ಆದರೆ, ಸಾಮಾನ್ಯವಾಗಿ ಪೂಜೆಯನ್ನು ಸೂರ್ಯೋದಯದ ನಂತರ ಮಾಡುತ್ತೇವೆ. ಸೂರ್ಯೋದಯದ ಒಳಗೆ ಸಂಧ್ಯಾವಂದನೆ ಮುಗಿದಿರಲೇ ಬೇಕಲ್ಲ. ಹೀಗಾಗಿ ಶಾಸ್ತ್ರೋಕ್ತ ಕ್ರಮವನ್ನು ಆಚರಿಸುವಾಗ ಯಾವ ಪಕ್ಷದಲ್ಲಾದರೂ ಎರಡು ಸ್ನಾನ ಇದ್ದೇ ಇರುತ್ತದೆ.

ಬೆಳಗಿನ ಜಾವದಲ್ಲಿ ಸಂಧ್ಯಾವಂದನೆಗಾಗಿ ಸ್ನಾನ. ಸೂರ್ಯೋದಯದ ನಂತರ ಪೂಜೆಗೊಂದು ಸ್ನಾನ ಎಂದು.

## ಶ್ರೀಮದಾಚಾರ್ಯರು ಅನುಸರಿಸುತ್ತಿದ್ದ ಕ್ರಮ

ಶ್ರೀಮದಾಚಾರ್ಯರು ಸೂರ್ಯೋದಯಕ್ಕೆ ಮುನ್ನ ನಿರ್ಮಾಲ್ಯವಿಸರ್ಜನೆಯನ್ನು ಮಾಡಿಸುತ್ತಿದ್ದರು. ಮಧ್ಯಾಹ್ನ ಪೂಜೆಗಿಂತ ಮುಂಚೆ ತಾವೇ ನಿರ್ಮಾಲ್ಯ ಅಭಿಷೇಕ ಮಾಡುತ್ತಿದ್ದರು ಎಂದು ಶ್ರೀ ಮಧ್ವವಿಜಯ ಸ್ಪಷ್ಟವಾಗಿ ತಿಳಿಸುತ್ತದೆ —

### ಸೂರ್ಯೋದಯಕ್ಕಿಂತ ಮುಂಚೆ ನಿರ್ಮಾಲ್ಯವಿಸರ್ಜನೆ

**ವಿಪುಲಹೃದಯಪಾರ್ಶ್ವೇ**
**ದೀಪದೀಪದೀಪ್ತಿಪ್ರದೀಪ್ತೇ**
**ದರವರಪರಿಪೂರ್ಣೈಃ**
**ವಾರ್ಭಿರರ್ಘ್ಯಾದಿ ದತ್ವಾ ।**

**ಯತಿರತಿಯತಚೇತಾಃ**
**ಚಕ್ರಿಣೋರ್ಚಾನಿಕಾಯಾತ್**
**ಕುಸುಮಸಮಿತಿಮಗ್ರ್ಯಾಂ**
**ಆದರಾದುಜ್ಜಹಾರ ।।**

ಹದಿನಾಲ್ಕನೆಯ ಸರ್ಗದ 12ನೆಯ ಶ್ಲೋಕವಿದು.

ಏಳನೆಯ ಶ್ಲೋಕದಲ್ಲಿ ಅರುಣೋದಯದ ಸಮಯಕ್ಕಾಗಲೇ ಶ್ರೀಮದಾಚಾರ್ಯರು ಸ್ನಾನ ಮಾಡಿ ಧ್ಯಾನಮಗ್ನರಾದದ್ದನ್ನು ತಿಳಿಸಿದ್ದಾರೆ.

8 ರಿಂದ ಹನ್ನೊಂದನೆಯ ಶ್ಲೋಕದಲ್ಲಿ ಶಿಷ್ಯಯತಿಗಳ ಸ್ನಾನವನ್ನು ಹೇಳಿದ್ದಾರೆ.

12ರಲ್ಲಿ ನಿರ್ಮಾಲ್ಯವಿಸರ್ಜನೆ. ಮತ್ತು ಇಲ್ಲಿ ಸ್ಪಷ್ಟವಾಗಿ ದೀಪಗಳ ಬೆಳಕಿನಲ್ಲಿ ಆಚಾರ್ಯರ ಯತಿಶಿಷ್ಯರು ನಿರ್ಮಾಲ್ಯವಿಸರ್ಜನೆ ಮಾಡಿದರು ಎಂಬ ಉಲ್ಲೇಖವಿದೆ.

13ರಲ್ಲಿ ನಿರ್ಮಾಲ್ಯಪುಷ್ಪಗಳ ಮಾಹಾತ್ಮ್ಯ.

14 ಮತ್ತು 15ನೆಯ ಶ್ಲೋಕಗಳಲ್ಲಿ ಸೂರ್ಯೋದಯವಾಯಿತು ಎಂದು ತಿಳಿಸಿದ್ದಾರೆ.

16ರಿಂದ 25ನೆಯ ಶ್ಲೋಕದವರೆಗೆ ಆಚಾರ್ಯರ ಪಾಠದ ಮಾಧುರ್ಯವನ್ನು ಚಿತ್ರಿಸಿ 26ನೆಯ ಶ್ಲೋಕದಲ್ಲಿ ಸೂರ್ಯ ಪಶ್ಚಿಮಕ್ಕೆ ಹೊರಳಿದಾಗ ಅರ್ಥಾತ್ ಮಧ್ಯಾಹ್ನದ ನಂತರ ಆಚಾರ್ಯರು

ಪೂಜೆಯ ಸ್ನಾನಕ್ಕೆದ್ದರು ಎಂದು ಹೇಳಿದ್ದಾರೆ. “ಅಥ ದಶಶತಶೋಚಿಷಿ ಆಪ್ರಯಾತಿ ಪ್ರತೀಚೀಮ್” ಎಂದು.

## ಮಧ್ಯಾಹ್ನ ಪೂಜೆಗಿಂತ ಮುಂಚೆ ನಿರ್ಮಾಲ್ಯ ಅಭಿಷೇಕ

28ನೆಯ ಶ್ಲೋಕದಲ್ಲಿ ಆಚಾರ್ಯರು ಮಾಡಿದ ನಿರ್ಮಾಲ್ಯದ ಅಭಿಷೇಕವನ್ನು ತಿಳಿಸಿದ್ದಾರೆ.

29ನೆಯ ಶ್ಲೋಕದಲ್ಲಿ ನಿರ್ಮಾಲ್ಯಪ್ರಾಶನವನ್ನು ಹೇಳಿದ್ದಾರೆ.

30ನೆಯ ಶ್ಲೋಕದಲ್ಲಿ  ಆಚಾರ್ಯರು ಊರ್ಧ್ವಪುಂಡ್ರಗಳನ್ನು ಧರಿಸಿದರು ಎಂದು ಹೇಳಿದ್ದಾರೆ.

ಹೀಗೆ ಆಚಾರ್ಯರ ಸಮಗ್ರ ದಿನಚರಿಯನ್ನು ದಾಖಲಿಸುವ 14ನೆಯ ಸರ್ಗದಲ್ಲಿ ಸೂರ್ಯೋದಯಕ್ಕಿಂತ ಮುಂಚೆ ನಿರ್ಮಾಲ್ಯವಿಸರ್ಜನೆ, ಸೂರ್ಯೋದಯದ ಅನಂತರ ಪಾಠ, ಮಧ್ಯಾಹ್ನದ ಸಮಯದಲ್ಲಿ

ನಿರ್ಮಾಲ್ಯಾಭಿಷೇಕವನ್ನು ತಿಳಿಸಿದ್ದಾರೆ. ಆಗ ನಿರ್ಮಾಲ್ಯಾಭಿಷೇಕದಿಂದಲೇ ಗೋಪೀಧಾರಣೆಯನ್ನೂ ತಿಳಿಸಿದ್ದಾರೆ.

## ಬೆಳಗಿನ ಊರ್ಧ್ವಪುಂಡ್ರ ಕೇವಲ ನೀರಿನಿಂದಲೇ

ಬೆಳಿಗ್ಗೆ ಆಚಾರ್ಯರು ಮತ್ತು ಆಚಾರ್ಯರ ಶಿಷ್ಯರು ಊರ್ಧ್ವಪುಂಡ್ರ ಧಾರಣೆ ಮಾಡುತ್ತಿದ್ದರು ತಾನೆ? ಮಾಡುತ್ತಿರಲಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಕಾರಣ, ಶಾಸ್ತ್ರವ್ಯಾಖ್ಯಾನ, ಮಂತ್ರಜಪಗಳಂತಹ ಶ್ರೇಷ್ಠ ಸತ್ಕರ್ಮಗಳನ್ನು ಊರ್ಧ್ವಪುಂಡ್ರವಿಲ್ಲದೇ ಮಾಡುವಂತಿಲ್ಲ. ಹೀಗಾಗಿ ಅವಶ್ಯವಾಗಿ ಧರಿಸುತ್ತಿದ್ದರು ಎಂದು ಹೇಳಬೇಕು.

## ಸಂನ್ಯಾಸಪದ್ಧತಿಯ ಪ್ರಮಾಣ

ಯುಕ್ತಿಯಷ್ಟೇ ಅಲ್ಲ, ಶ್ರೀಮನ್ ಮಧ್ವಾನುಜಾ-ಚಾರ್ಯರ ವಾಕ್ಯದ ಪ್ರಮಾಣವೂ ಇದೆ. ಸಂನ್ಯಾಸಪದ್ಧತಿಯಲ್ಲಿ ಸಕಲ ಆಶ್ರಮದವರ ಧರ್ಮಾಚರಣೆಯನ್ನು ನಿರೂಪಿಸುತ್ತಿರುವ ಶ್ರೀ ಮಧ್ವಾನುಜಾಚಾರ್ಯರು ಅರುಣೋದಯಕ್ಕಿಂತ

ಮುಂಚೆ ಏಳುವ ವಿಧಿಯನ್ನು ನಿರೂಪಿಸಿ, ಶೌಚ-ದಂತಧಾವನ-ಸ್ನಾನಗಳನ್ನು ನಿರೂಪಿಸಿದ ತಕ್ಷಣ ಸಂಧ್ಯಾವಂದನೆ ಮತ್ತು ನಿರ್ಮಾಲ್ಯವಿಸರ್ಜನೆಗಳ ಮಧ್ಯದಲ್ಲಿ ಗೋಪೀಚಂದನ ಧಾರಣೆಯ ಕ್ರಮ ಹಾಗೂ ಊರ್ಧ್ವಪುಂಡ್ರಗಳ ಮಾಹಾತ್ಮ್ಯವನ್ನು ತಿಳಿಸಿ ಹೇಳಿದ್ದಾರೆ.

ಎಂಟೂವರೆ ಶ್ಲೋಕಗಳಲ್ಲಿ ಸ್ನಾನವನ್ನು ನಿರೂಪಿಸಿ

**ಹಂಸಾದೀನಾಂ ಯತೀನಾಂ ಚ**
**ಬ್ರಹ್ಮಚಾರ್ಯಾದಿನಾಮಪಿ**
**ಪೂರ್ವೋಕ್ತೇನೈವ ಮಾರ್ಗೇಣ**
**ಭವೇತ್ ಸ್ನಾನವಿಧಿಃ ಪರಃ**

ಎಂದು ಸ್ನಾನದ ಕ್ರಮವನ್ನು ಹೇಳಿ ಮುಂದಿನ ಶ್ಲೋಕದಲ್ಲಿಯೇ

**ಮೃದಾ ಗೋಪಿಕಯಾ ಚೋರ್ಧ್ವ-**
**ಪುಂಡ್ರಂ ಕುರ್ಯಾತ್ ಸಮಾಹಿತಃ**

ಎಂದು ಗೋಪೀಧಾರಣೆಯನ್ನು ಹೇಳಿದ್ದಾರೆ. ಆ ನಂತರ 32 ಶ್ಲೋಕಗಳಲ್ಲಿ ವಿಸ್ತಾರವಾಗಿ ಧಾರಣೆಯ

ಕ್ರಮವನ್ನು, ಊರ್ಧ್ವಪುಂಡ್ರದ ಮಾಹಾತ್ಮ್ಯವನ್ನು ಹೇಳಿ, ತಿರ್ಯಕ್ ಪುಂಡ್ರಧಾರಣೆಯ ನಿಷೇಧವನ್ನೂ ಪ್ರತಿಪಾದಿಸಿ ಆ ನಂತರ ನಿರ್ಮಾಲ್ಯ ವಿಸರ್ಜನೆಯನ್ನು ತಿಳಿಸುತ್ತಾರೆ. ಮತ್ತು ಆ ನಿರ್ಮಾಲ್ಯವನ್ನು ಧರಿಸಿಯೇ ಮುಂದಿನ ಕರ್ಮಾಚರಣೆಯನ್ನು ಮಾಡಬೇಕು ಎಂದು ನಿರೂಪಿಸುತ್ತಾರೆ —

**ತ್ಯಕ್ತ್ವಾ ಪುಷ್ಪಾಣಿ ಶಿರಸಿ**
**ಧಾರಯನ್ ಕರ್ಣಯೋರಪಿ ।**
**ಜಿಘ್ರೇತ್ ಪೌರಾಣಿಕಾನ್ ಶ್ಲೋಕಾನ್**
**ಪ್ರಾಮಾಣ್ಯಾಯ ವದಾಮಿ ಚ ॥**

ತ್ಯಕ್ತ್ವಾ ಪುಷ್ಪಾಣಿ — ನಿರ್ಮಾಲ್ಯ ವಿಸರ್ಜನೆಯನ್ನು ಮಾಡಿ

ಶಿರಸಿ ಕರ್ಣಯೋರಪಿ — ತಲೆಯಲ್ಲಿ ಮತ್ತೆ ಕಿವಿಯಲ್ಲಿ ತುಳಸಿಯನ್ನು ಧರಿಸಿ

ಜಿಘ್ರೇತ್ — ಮೂಗಿನಿಂದ ಆಘ್ರಾಣಿಸಬೇಕು.

ಅದಾದ ನಂತರ

ಹೀಗೆ ಸೂರ್ಯೋದಯಕ್ಕಿಂತ ಮುಂಚೆ ಸ್ನಾನ, ಗೋಪೀಧಾರಣೆ, ನಿರ್ಮಾಲ್ಯವಿಸರ್ಜನೆ, ಸಂಧ್ಯಾವಂದನೆ, ತುಳಸೀಚಯನ, ಶಾಸ್ತ್ರಾಧ್ಯಯನ, ಆ ನಂತರ ಮತ್ತೆ ಸ್ನಾನ, ಆ ಬಳಿಕ ನಿರ್ಮಾಲ್ಯ ಅಭಿಷೇಕ, ಆ ನಿರ್ಮಾಲ್ಯ ತೀರ್ಥದಿಂದ ಗೋಪೀಧಾರಣೆ ಆ ಬಳಿಕ ಪೂಜೆ ಎನ್ನುವದು ಶ್ರೀ ಮಧ್ವವಿಜಯ ಮತ್ತು ಶ್ರೀ ಸಂನ್ಯಾಸಪದ್ಧತಿಗಳಿಂದ ಸುಸ್ಪಷ್ಟವಾಗಿ ತೋರುತ್ತದೆ. ಧರ್ಮಶಾಸ್ತ್ರದ ವಚನಗಳೂ ಇದಕ್ಕೆ ಸಂವಾದಿಯಾಗಿಯೇ ಇವೆ.

## ಯೋಗದೀಪಿಕಾ ವಚನ

ಶ್ರೀ ನಾರಾಯಣಪಂಡಿತಾಚಾರ್ಯರೂ ಸಹ ತಮ್ಮ ಯೋಗದೀಪಿಕಾ ಗ್ರಂಥದಲ್ಲಿ ಸ್ನಾನ ಮುಗಿಸಿ ವಸ್ತ್ರಧಾರಣೆ ಮಾಡಿದ ತಕ್ಷಣ, ನಿರ್ಮಾಲ್ಯ ವಿಸರ್ಜನೆ, ಸಂಧ್ಯಾವಂದನೆಗಳಿಗಿಂತ ಮೊದಲು ಗೋಪೀಚಂದನ ಧಾರಣೆಯನ್ನು ಹೇಳಿದ್ದಾರೆ —

**ವಿಷ್ಣುಪಾದೋದಕಸ್ನಾಯೀ**
**ಶುಚಿನಾವೇಷ್ಟ್ಯ ವಾಸಸಾ**
**ಆಚಮ್ಯ ಪುನರಾಚಮ್ಯ**
**ಗೋಪ್ಯಾ ಪುಂಡ್ರಾಣಿ ಧಾರಯೇತ್**
**ಸಲಿಲೈರ್ವಾಪ್ಯಸೌ...**

ಸ್ನಾನ ಮುಗಿಸಿ ಬಟ್ಟೆಯನ್ನು ಧರಿಸಿ ಗೋಪೀಚಂದನದಿಂದ ಊರ್ಧ್ವಪುಂಡ್ರಗಳನ್ನು ಧರಿಸಬೇಕು.

ನೀರಿನಿಂದಾದರೂ ಧರಿಸಬೇಕು ಎಂದು ಪೂಜೆಯ ಸ್ನಾನದಲ್ಲಿ ನೀರಿನಿಂದ ಧಾರಣೆಯನ್ನೂ ಶ್ರೀ ಪಂಡಿತಾಚಾರ್ಯರು ತಿಳಿಸಿದ್ದಾರೆ.

## ಶ್ರೀ ಕೃಷ್ಣಾಚಾರ್ಯರ ವಚನ

ಶ್ರೀ ಸ್ಮೃತಿಮುಕ್ತಾವಲೀ ಕೃಷ್ಣಾಚಾರ್ಯರೂ ಸಹ ಸದಾಚಾರಸ್ಮೃತಿಗೆ ವ್ಯಾಖ್ಯಾನವನ್ನು ಮಾಡುತ್ತ ಆಚಾರ್ಯರ

**ವಸಿತ್ವಾ ವಾಸ ಆಚಮ್ಯ**
**ಪ್ರೋಕ್ಷ್ಯಾಚಮ್ಯ ಚ ಮಂತ್ರತಃ ।**
**ಗಾಯತ್ರ್ಯಾಂಜಲಿ ದತ್ವಾ**
**ಧ್ಯಾತ್ವಾ ಸೂರ್ಯಗತಂ ಹರಿಮ್ ।।**

"ಬಟ್ಟೆಯನ್ನು ಧರಿಸಿ ಸಂಧ್ಯಾವಂದನೆಯನ್ನು ಮಾಡಬೇಕು" ಎಂಬ ಮಾತಿಗೆ ವ್ಯಾಖ್ಯಾನ ಮಾಡುತ್ತ ಬಟ್ಟೆಯನ್ನು ಧರಿಸಿ ಗೋಪೀಚಂದನವನ್ನು ಧರಿಸಿಯೇ ಸಂಧ್ಯಾವಂದನೆ ಮಾಡಬೇಕು ಎಂದು ಸಾಕಷ್ಟು ಪ್ರಮಾಣಗಳನ್ನು ನೀಡಿ ಪ್ರತಿಪಾದಿಸಿದ್ದಾರೆ.

ಸ್ಮೃತಿಮುಕ್ತಾವಲಿಯಲ್ಲಂತೂ ಗೋಪೀಚಂದ-ನಾದಿಗಳ ಮಾಹಾತ್ಮ್ಯವನ್ನೂ ಪ್ರತಿಪಾದಿಸಿ ಈ ತತ್ವವನ್ನು ಸುಸ್ಥಾಪಿಸಿದ್ದಾರೆ ಶ್ರೀ ಕೃಷ್ಣಾಚಾರ್ಯರು.

## ಶ್ರೀ ಶ್ರೀನಿವಾಸಾಚಾರ್ಯರು ಮುಂತಾದವರ ವಚನ

ಶ್ರೀ ಯಾದವಾರ್ಯರ ಶಿಷ್ಯರಾದ ಬಿದರಹಳ್ಳಿ ಶ್ರೀ ಶ್ರೀನಿವಾಸಾಚಾರ್ಯರು ಸದಾಚಾರಸ್ಮೃತಿಗೆ ವ್ಯಾಖ್ಯಾನವಾಗಿ ಆಹ್ನೀಕಕೌಸ್ತುಭ ಎಂಬ ಉತ್ತಮ ಕೃತಿಯನ್ನು ರಚಿಸಿದ್ದಾರೆ.

ಅದರಲ್ಲಿ ಅತ್ಯಂತ ಸ್ಪಷ್ಟವಾಗಿ — **"ಅಥ ಸಂಧ್ಯೋತ್ತರಂ ನಿರ್ಮಾಲ್ಯ ವಿಸರ್ಜನಂ ಕುರ್ಯಾತ್"** ಎಂದು ಸಂಧ್ಯಾವಂದನೆಯ ನಂತರವೇ ನಿರ್ಮಾಲ್ಯವಿಸರ್ಜನೆಯನ್ನು ಮಾಡಬೇಕು ಎಂದು ಬರೆದಿದ್ದಾರೆ.

ಹಾಗೆಯೇ ಶ್ರೀ ಕಾಗಲೂರು ಆನಂದತೀರ್ಥಾಚಾರ್ಯರ ಮಗ ಸ್ಮೃತಿಮಾಣಿಕ್ಯ ಸಂಗ್ರಹ ಎಂಬ ಕೃತಿಯನ್ನು ಸದಾಚಾರಸ್ಮೃತಿಯ ವ್ಯಾಖ್ಯಾನವಾಗಿ ರಚಿಸಿದ್ದಾರೆ, ಅದರಲ್ಲಿಯೂ ಸ್ನಾನದ ನಂತರವೇ ಗೋಪೀಚಂದನಧಾರಣೆಯನ್ನು ಹೇಳಿದ್ದಾರೆ.

ಅಷ್ಟೇ ಅಲ್ಲ, ಸದಾಚಾರಸ್ಮೃತಿಗೆ ವ್ಯಾಖ್ಯಾನ ಮಾಡಿರುವ ಎಲ್ಲ ವ್ಯಾಖ್ಯಾನಕಾರರೂ ಸಹ

ಒಕ್ಕೊರಲಿನಿಂದ ಸ್ನಾನದ ನಂತರ, ಸಂಧ್ಯಾವಂದನೆ, ನಿರ್ಮಾಲ್ಯವಿಸರ್ಜನೆಗಿಂತ ಮೊದಲು ಊರ್ಧ್ವಪುಂಡ್ರಧಾರಣೆಯನ್ನು ತಿಳಿಸಿದ್ದಾರೆ.

ಇವೆಲ್ಲದರಿಂದ ಸಿದ್ಧವಾಗುವ ವಿಷಯ ಊರ್ಧ್ವಪುಂಡ್ರದ ಧಾರಣೆ, ನಿರ್ಮಾಲ್ಯತೀರ್ಥದಿಂದಲೇ ಆಗಬೇಕೆಂಬ ನಿಯಮವಿಲ್ಲ. ನಿರ್ಮಾಲ್ಯತೀರ್ಥದಿಂದ ಹಚ್ಚಿಕೊಳ್ಳುವದು ಶ್ರೇಷ್ಠ. ಸಂಶಯವೇ ಇಲ್ಲ.

ಆದರೆ ಬೆಳಗಿನ ಜಾವದಲ್ಲಿ ಇನ್ನೂ ನಿರ್ಮಾಲ್ಯ ತೀರ್ಥ ದೊರೆಯದೇ ಇದ್ದಾಗ ಕೇವಲ ನೀರಿನಿಂದಲೇ ಹಚ್ಚಿಕೊಳ್ಳಬೇಕು.

ಯಾವ ನೀರಿನಿಂದ ಹಚ್ಚಿಕೊಳ್ಳಬೇಕೋ ಆ ನೀರನ್ನು ಗಾಯತ್ರಿಯಿಂದ ಅಭಿಮಂತ್ರಿಸಬೇಕು ಎಂದು ಶ್ರೀ ಕೃಷ್ಣಾಚಾರ್ಯರು ಪ್ರಮಾಣಪುರಸ್ಸರವಾಗಿ ತಿಳಿಸಿದ್ದಾರೆ. ಸದಾಚಾರಸ್ಮೃತಿಯ ಅನುವಾದದಲ್ಲಿ ಅದನ್ನು ತಿಳಿಸುತ್ತೇನೆ.

ಇನ್ನು ಕೆಲವರು ಬೆಳಗಿನ ಹೊತ್ತು ಒಂದು ಸುದರ್ಶನವನ್ನಿಟ್ಟುಕೊಂಡು ಅದಕ್ಕೆ ಅಭಿಷೇಕ ಮಾಡಿ ಅದರ ನಿರ್ಮಾಲ್ಯದಿಂದ ಗೋಪೀಚಂದನವನ್ನು ಹಚ್ಚಿಕೊಳ್ಳುತ್ತಾರೆ.

ಇದಕ್ಕೆ ಶಾಸ್ತ್ರದ ಆಧಾರವಿಲ್ಲ, ಕೆಲವರ ಪದ್ಧತಿಯಷ್ಟೇ ಇದು. ಶಾಸ್ತ್ರಕ್ಕೆ ವಿರುದ್ಧವೂ ಅಲ್ಲ, ಅವಿರುದ್ಧವೂ ಅಲ್ಲ.

ಸಂಪ್ರದಾಯಗಳು ಶಾಸ್ತ್ರಕ್ಕೆ ವಿರುದ್ಧವಾಗಿದ್ದಾಗ ಪ್ರಶ್ನಾರ್ಹವಾಗುತ್ತವೆ. ಅವಿರುದ್ಧವಾಗಿದ್ದಾಗ ಮಾಡಿದರೆ ತಪ್ಪಿಲ್ಲ.

ಮುಂದೆ ಯಾರಾದರೂ ಇದಕ್ಕೆ ಸ್ಪಷ್ಟ ಶಾಸ್ತ್ರವಿರೋಧವನ್ನು ತೋರಿದಲ್ಲಿ ಕೈಬಿಡಬೇಕಾಗುತ್ತದೆ. ಅಲ್ಲಿಯವರೆಗೆ ಅನುಸರಿಸಲು ತಪ್ಪಿಲ್ಲ.

ಹೀಗಾಗಿ ವಿಷ್ಣುಪಾದೋದಕದಿಂದಲೇ ಊರ್ಧ್ವಪುಂಡ್ರಧಾರಣೆಯನ್ನು ಮಾಡಬೇಕೆಂಬ ದೀಕ್ಷೆಯುಳ್ಳ ಸಜ್ಜನರು, ಸ್ನಾನ ಮಾಡಿ, ನೀರಿನಿಂದ ಊರ್ಧ್ವಪುಂಡ್ರಗಳನ್ನು ಧಾರಣೆ ಮಾಡಿ,

ಸುದರ್ಶನಕ್ಕೆ ಅಭಿಷೇಕವನ್ನು ಮಾಡಿ, ಅದರ ನಿರ್ಮಾಲ್ಯತೀರ್ಥದಿಂದ ಗೋಪೀಚಂದನವನ್ನು ಧಾರಣೆ ಮಾಡಬಹುದು.

ನಿರ್ಮಾಲ್ಯತೀರ್ಥ ಪ್ರಾಶನವನ್ನು ಮಾತ್ರ ಪೂಜೆಗಿಂತ ಮೊದಲು ಮಾಡುವ ನಿರ್ಮಾಲ್ಯಾಭಿಷೇಕದಿಂದ ಮಾಡುವದೊಳಿತು. ಕಾರಣ ಅನೇಕ ಸಾಲಿಗ್ರಾಮಪ್ರತಿಮೆಗಳ ಪಾದೋದಕ ದೊರೆಯುತ್ತದೆ.

ಸ್ವಯಂ ಶ್ರೀಮದಾಚಾರ್ಯರು ಎರಡನೇ ಸ್ನಾನದಲ್ಲಿಯೇ ನಿರ್ಮಾಲ್ಯತೀರ್ಥಪ್ರಾಶನವನ್ನು ಮಾಡುತ್ತಿದ್ದರೆಂದು ಮಧ್ವವಿಜಯ ದಾಖಲಿಸಿದೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491